ದಿನಾಂಕಃ 22.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಶ್ರೀ ಹೆಚ್.ಕೆ.ಡಿ. ವಕೀಲರಿಂದ – ಆರೋಪಿತನ ಪರವಾಗಿ**

1. ನಾನು ಬಿ.ಎ., ಪದವೀದರನಾಗಿರುತ್ತೇನೆ. ಆರೋಪಿಯು ನನಗೆ 2010 ರಿಂದ ಪರಿಚಯ ಇರುತ್ತಾರೆ. ನಾನು ಕಾಫಿ ಬೆಳೆಗಾರ ಮತ್ತು ದಿನಸಿ ಅಂಗಡಿಯನ್ನು ಉದ್ಯೋಗ ಮಾಡಿಕೊಂಡಿರುತ್ತೇನೆ. ನನ್ನ ದಿನಸಿ ಅಂಗಡಿಯು ಮೂಡಿಗೆರೆ ಪೇಟೆಯಲ್ಲಿ ಇರುತ್ತದೆ. ನನ್ನ ಒಟ್ಟು ಕುಟುಂಬದ ಆಸ್ತಿ ಒಟ್ಟು 22 ಎಕರೆ ಇರುತ್ತದೆ. ಸದರಿ ಆಸ್ತಿಯನ್ನು ನಾನೇ ನೋಡಿಕೊಂಡಿರುತ್ತೇನೆ. ಸದರಿ ಕಾಫಿ ತೋಟದಲ್ಲಿ ರೋಬಸ್ಟ ಕಾಫಿ ಬೆಳೆಯನ್ನು ಬೆಳೆದಿರುತ್ತೇನೆ. ಆರೋಪಿಯು ಕಾಫಿ ವ್ಯಾಪಾರ ಮಾಡುತ್ತಿರುವ ಕಾರಣ ನನಗೆ ಪರಿಚಯಸ್ಥರಾಗಿರುತ್ತಾರೆ. 2010 ನೇ ಇಸವಿಯಿಂದ ನಾನು ಆರೋಪಿಗೆ ಕಾಫಿ ಬೆಳೆಯನ್ನು ಮಾರಾಟ ಮಾಡಿರುತ್ತೇನೆ. 2010 ನೇ ಇಸವಿಯಲ್ಲಿ ಎಷ್ಟು ಮೂಟೆ ಕಾಫಿ ಆರೋಪಿಗೆ ಮಾರಾಟ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಆರೋಪಿಗೆ ಕಾಫಿ ಬೆಳೆಯನ್ನು ಮಾರಾಟ ಮಾಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. 2014 ಮತ್ತು 2015 ನೇ ಇಸವಿಯಲ್ಲಿ ನಾನು ಒಟ್ಟು 500 ಮೂಟೆ ರೋಬಸ್ಟ ಚೆರಿ ಕಾಫಿ ಬೆಳೆಯನ್ನು ಆರೋಪಿಗೆ ಮಾರಾಟ ಮಾಡಿರುತ್ತೇನೆ. ಆರೋಪಿಯು ಖರೀದಿ ಮಾಡಿ ದಿಃ 06.03.2015 ರಲ್ಲಿ ನನಗೆ ಚೆಕ್ಕು ನೀಡಿರುತ್ತಾರೆ. ಆರೋಪಿಗೆ ಯಾವ ದಿನಾಂಕದಂದು ಕಾಫಿಯನ್ನು ಮಾರಾಟ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಆರೋಪಿಯು ದಿಃ 15.03.2015 ರ ದಿನಾಂಕ ನಮೂದು ಮಾಡಿ ನನಗೆ ಚೆಕ್ಕು ನೀಡಿರುತ್ತಾರೆ. ಆರೋಪಿಯ ಪರವಾಗಿ ವೆಂಕಟೇಶ್ವರ ಕಾಫಿ ಏಜನ್ಸಿ ರವರು ಕಾಫಿಯನ್ನು ಖರೀದಿ ಮಾಡಲು ಬಂದಿದ್ದರು. ಕಾಫಿ ಬೆಳೆಯನ್ನು ಕೊಂಡುಹೋಗಲು ಬಂದ ವ್ಯಕ್ತಿಯ ಹೆಸರು ನನಗೆ ಈಗ ನೆನಪಿಲ್ಲ. ದಿಃ 15.03.2015 ರ ಚೆಕ್ಕನ್ನು ನನಗೆ ಆರೋಪಿಯು ನೀಡಿರುತ್ತಾರೆ. ಯಾವ ದಿನಾಂಕದಂದು ಸದರಿ ಚೆಕ್ಕನ್ನು ಆರೋಪಿಯು

ನೀಡಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ದಿಃ 15.03.2015 ರ ಚೆಕ್ಕನ್ನು ನನ್ನ ತೋಟದಲ್ಲಿ ಆರೋಪಿಯು ನೀಡಿರುತ್ತಾರೆ. 2014 ರ ಮೊದಲಿನ ಕಾಫಿ ಮಾರಾಟದ ವ್ಯವಹಾರಗಳು ನನಗೆ ನಗದು ರೂಪದಲ್ಲಿ ಸಂದಾಯ ಆಗಿರುತ್ತದೆ. ಆರೋಪಿ ಯಾವ ವಾಹನದಲ್ಲಿ ಸದರಿ ಕಾಫಿ ಬೀಜವನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ನನಗೆ ನೆನಪಿಲ್ಲ. ಕಾಫಿಯನ್ನು ನನ್ನ ತೋಟದಿಂದ ಖರೀದಿ ಮಾಡಿಕೊಂಡು ಹೋದ ಬಗ್ಗೆ ನಾನು ಆರೋಪಿಗೆ ತಿಳಿಸಿರುತ್ತೇನೆ. ಆ ಮೇರೆಗೆ ಆರೋಪಿಯೇ ಸದರಿ ಖರೀದಿಯ ಪಾವತಿಗಾಗಿ ಚೆಕ್ಕನ್ನು ನೀಡಿರುತ್ತಾರೆ. ಆರೋಪಿಯು ನನ್ನ ತೋಟದಲ್ಲಿ ಕಾಫಿ ಬೀಜಗಳನ್ನು ತೂಕ ಮಾಡಿ ಕೊಂಡು ಹೋಗಿರುವುದರಿಂದ ಆರೋಪಿಯ ಬಳಿ ಎಷ್ಟು ತೂಕದ ಕಾಫಿ ಬಂದಿರುತ್ತದೆ ಎಂದು ನಾನು ವಿಚಾರಿಸಿರುವುದಿಲ್ಲ. ಆರೋಪಿಯಿಂದ ಎಷ್ಟು ಕೆ.ಜಿ ಕಾಫಿಯನ್ನು ಖರೀದಿ ಮಾಡಿರುತ್ತಾರೆ ಎನ್ನುವ ಬಗ್ಗೆ ನಾನು ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. 2015 ರ ನಂತರ ನಾನು ಮೂಡಿಗೆರೆಯಲ್ಲಿ ಬೇರೆ ಬೇರೆ ಕಾಫಿ ಖರೀದಿದಾರರಿಗೆ ಕಾಫಿ ಮಾರಾಟವನ್ನು ಮಾಡಿರುತ್ತೇನೆ. 2010 ರಿಂದ 2015 ರವರೆಗೆ ಒಟ್ಟು ಎಷ್ಟು ಮೂಟೆ ಕಾಫಿ ಬೆಳೆದಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. 2010 ರಿಂದ 2015 ರವರೆಗೆ ನನಗೆ ವಾರ್ಷಿಕ ಎಷ್ಟು ಆದಾಯ ಇತ್ತು ಎಂದು ಈಗ ನೆನಪಿಲ್ಲ. ದಿನಸಿ ಅಂಗಡಿಯಿಂದ ನನಗೆ ವಾರ್ಷಿಕ 2 ಲಕ್ಷ ಸಂಪಾದನೆ ಇರುತ್ತದೆ. ಆರೋಪಿಗೆ 2010 ರಿಂದ 2015 ರವರೆಗೆ ಕಾಫಿ ಮಾರಟ ಮಾಡಿದ ಬಗ್ಗೆ ನಾನು ಯಾವುದೇ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ಆರೋಪಿಯು ನಗದು ರೂಪದಲ್ಲಿ ಹಣ ಪಾವತಿ ಮಾಡುತ್ತಿದ್ದರು. ಆದಾಯ ತೆರಿಗೆಯಲ್ಲಿ ನಾನು ಕಾಫಿ ಮಾರಾಟದ ಬಗ್ಗೆ ನಮೂದು ಮಾಡಿರುವುದಿಲ್ಲ.

2. ಆರೋಪಿಯು ಹಣ ಪಾವತಿ ಮಾಡದ ಬಗ್ಗೆ ಪದೇ ಪದೇ ಕೇಳಿದ ನಂತರ ದಿಃ 07.01.2019 ರ ದಿನಾಂಕ ನಮೂದಿಸಿ ಚೆಕ್ಕನ್ನು ನೀಡಿರುತ್ತಾರೆ. ಮೊದಲ

ಚೆಕ್ಕನ್ನು ನೀಡಿದ ನಂತರ ಸುಮಾರು 3 ವರೆ ವರ್ಷಗಳ ನಂತರ ನಿ.ಪಿ.1 ಚೆಕ್ಕನ್ನು ಆರೋಪಿಯು ನೀಡಿರುತ್ತಾರೆ. ಸದರಿ ವಿಚಾರವನ್ನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. 2015 ರ ನಂತರ ನಾನು ಆರೋಪಿಯ ಬಳಿ ಯಾವುದೇ ವ್ಯವಹಾರವನ್ನು ಮಾಡಿಕೊಂಡಿರುವುದಿಲ್ಲ. ಎಂ.ಎಸ್. ಪ್ರದೀಪ್ ಕುಮಾರ್ ರವರು ನನಗೆ ಪರಿಚಯ ಇರುತ್ತಾರೆ. ಎಂ.ಎಸ್. ಪ್ರದೀಪ್ ಕುಮಾರ್ ರವರು ಆರೋಪಿಯ ಜೊತೆ ವ್ಯವಹಾರವನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಎಂ.ಎಸ್. ಪ್ರದೀಪ್ ಕುಮಾರ್ ಆರೋಪಿಯ ವಿರುದ್ದ ಮತ್ತು ಆರೋಪಿಯ ಪತ್ನಿಯ ವಿರುದ್ದ ಚೆಕ್ಕು ಅಮಾನ್ಯ ಪ್ರಕರಣಗಳನ್ನು ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಜಮೀನು ಇರುವ ಬಗ್ಗೆ ನನಗೆ ಗೊತ್ತಿತ್ತು. 2014-2015 ರಲ್ಲಿ ಆರೋಪಿಗೆ ಕಾಫಿ ಮಾರಾಟ ಮಾಡಿದ ಬಗ್ಗೆ ಸಂಪೂರ್ಣ ಹಣವನ್ನು ಆರೋಪಿಯು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ಚೆಕ್ಕನ್ನು ಆರೋಪಿಯು ಅವರ ಕಚೇರಿಯಲ್ಲಿ ನನಗೆ ನೀಡಿರುತ್ತಾರೆ. ನಿ.ಪಿ.1 ಚೆಕ್ಕನ್ನು ಆರೋಪಿಯೇ ಬರೆದು ತಂದಿರುತ್ತಾರೆ. ನಿ.ಪಿ.1 ರಲ್ಲಿ ಬರವಣಿಗೆಗೂ ಸಹಿಯಲ್ಲಿ ಇರುವ ಶಾಯಿಗೂ ವ್ಯತ್ಯಾಸ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯು ಕಚೇರಿಯಲ್ಲಿ ನಿ.ಪಿ.1 ಚೆಕ್ಕನ್ನು ಬರೆದು ಇಟ್ಟಿದ್ದರು ನಾನು ಹೋದಾಗ ಚೆಕ್ಕನ್ನು ನೀಡಿರುತ್ತಾರೆ. 2014-2015 ರಲ್ಲಿ 500 ಮೂಟೆ ಕಾಫಿಯನ್ನು ಆರೋಪಿಗೆ ಮಾರಾಟ ಮಾಡಿದ ಬಗ್ಗೆ ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ದಿನಾಂಕ: 09.02.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ ಆರ್.ಎಸ್.ಕೆ. ವಕೀಲರಿಂದ – ಆರೋಪಿತನ ಪರವಾಗಿ

3. ನನ್ನ ಪಿರ್ಯಾದಿ ಮತ್ತು ನಿ.ಪಿ.3 ನೋಟೀಸಿನಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ. ನನ್ನ ಮತ್ತು ಆರೋಪಿಯ ವ್ಯವಹಾರ ದಿ: 06.03.2015 ಕ್ಕಿಂತ ಹಿಂದಿನ ವ್ಯವಹಾರ ಎಂದರೆ ಸರಿ. ಈ ಪ್ರಕರಣದಲ್ಲಿ ನಮೂದು ಮಾಡಿರುವ ಚೆಕ್ಕು ಸಂಖ್ಯೆ 123732 ಚೆಕ್ಕು 06.03.2015 ಕ್ಕಿಂತ ಹಿಂದಿನ ವ್ಯವಹಾರಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸದರಿ 06.03.2015 ರ ಚೆಕ್ಕನ್ನು ಆರೋಪಿಯು ನಗದೀಕರಣಕ್ಕೆ ಸಲ್ಲಿಸಲು ಬೇಡ ಎಂದು ಹೇಳಿದ ಕಾರಣ ನಾನು ಸದರಿ ಚೆಕ್ಕಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಸದರಿ 06.03.2015 ರಂದು ಆರೋಪಿಯು ನೀಡಿರುವ ಚೆಕ್ಕನ್ನು ನಾನು ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿರುವುದಿಲ್ಲ. ನಿ.ಪಿ.1 ಚೆಕ್ಕನ್ನು ಆರೋಪಿಯು 07.01.2019 ಕ್ಕೆ ನೀಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ದಿ: 06.03.2015 ರಲ್ಲಿ ನೀಡಿರುವ ಚೆಕ್ಕಿಗೂ ನಿ.ಪಿ.1 ಚೆಕ್ಕಿನ ನಡುವೆ ಸುದೀರ್ಘ 4 ವರ್ಷ ಅವಧಿ ಇತ್ತು ಎಂದರೆ ಸರಿ. ಆರೋಪಿಯಿಂದ ನನಗೆ ಯಾವುದೇ ಹಣ ಬರಲು ಬಾಕಿ ಇರದ ಕಾರಣ ನಾನು ದಿ: 06.03.2015 ರ ಚೆಕ್ಕಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಿ: 06.03.2015 ರ ಚೆಕ್ಕು ನನ್ನ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ದಿ: 06.03.2015 ರ ಚೆಕ್ಕನ್ನು ಯಾವತ್ತೂ ಆರೋಪಿಯು ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿ: 06.03.2015 ಚೆಕ್ಕನ್ನು ಆರೋಪಿಯು ನನ್ನ ಸ್ನೇಹಿತ ಎಂ.ಎಸ್. ಪ್ರದೀಪ್ ಕುಮಾರ್ ರವರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ಚೆಕ್ಕನ್ನು ಆರೋಪಿಯು ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ಚೆಕ್ಕನ್ನು ಆರೋಪಿಯು ನನ್ನ ಸ್ನೇಹಿತ ಎಂ.ಎಸ್. ಪ್ರದೀಪ್ ಕುಮಾರ್ ರವರಿಗೆ

ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ಚೆಕ್ಕಿನ ಜೊತೆ ಆರೋಪಿಗೆ ಸೇರಿದ 16 ರ ಕ್ಕಿಂತ ಹೆಚ್ಚು ಚೆಕ್ಕುಗಳು ನನ್ನ ಸ್ನೇಹಿತ ಎಂ.ಎಸ್. ಪ್ರದೀಪ್ ಕುಮಾರ್ ರವರ ಬಳಿ ಇತ್ತು ಎಂದು ಆರೋಪಿಯು ಚಿಕ್ಕಮಗಳೂರು ಎಸ್.ಪಿ ರವರಿಗೆ ದಿಃ 16.01.2019 ರಂದು ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.3 ನೋಟೀಸನ್ನು ನೀಡುವ ಮೊದಲೇ ಆರೋಪಿಗೆ ಸೇರಿದ ಎಲ್ಲಾ ಚೆಕ್ಕುಗಳನ್ನು ವಾಪಸ್ಸು ನೀಡುವಂತೆ ಆರೋಪಿಯು ಎಂ.ಎಸ್. ಪ್ರದೀಪ್ ಕುಮಾರ್ ರವರಿಗೆ ನೋಟೀಸು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಸದರಿ ಎಂ.ಎಸ್. ಪ್ರದೀಪ್ ಕುಮಾರ್ ರವರ ವಿರುದ್ದ ಎಸ್.ಪಿ. ರವರಿಗೆ ದೂರು ನೀಡಿದ ಕಾರಣ ನನ್ನ ಮೂಲಕ ನಿ.ಪಿ.1 ಚೆಕ್ಕನ್ನು ದುರ್ಬಳಕೆ ಮಾಡಿಕೊಂಡು ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

4. ನಿ.ಪಿ.1 ಚೆಕ್ಕು ಮತ್ತು ಆರೋಪಿಗೆ ಸೇರಿದ ಇತರ ಚೆಕ್ಕುಗಳಿಗೆ ಸಂಬಂಧಿಸಿದಂತೆ ಆರೋಪಿಯು ಚಿಕ್ಕಮಗಳೂರು ನ್ಯಾಯಾಲಯದಲ್ಲಿ ನನ್ನ ವಿರುದ್ದ ಮತ್ತು ನನ್ನ ಸ್ನೇಹಿತ ಎಂ.ಎಸ್. ಪ್ರದೀಪ್ ಕುಮಾರ್ ಹಾಗೂ ಕೆ.ಆರ್. ಮಹೇಶ್ ರವರ ವಿರುದ್ದ ಖಾಸಗಿ ಪಿರ್ಯಾದಿ ಸಂಖ್ಯೆ ಪಿ.ಸಿ.ಆರ್.26/2021 ರಂತೆ ದಾಖಲು ಮಾಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಇದುವರೆಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ದಿನಸಿ ಅಂಗಡಿ ಮತ್ತು ಎಂ.ಎಸ್. ಪ್ರದೀಪ್ ಕುಮಾರ್ ರವರ ಕಚೇರಿಯು ಒಂದೇ ಕಟ್ಟಡದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಿಃ 06.03.2015 ರಂದು ಆರೋಪಿಯು ನನಗೆ ನೀಡಿದ್ದಾರೆ ಎಂದು ಹೇಳಿದ ಚೆಕ್ಕು ಸಂಖ್ಯೆ 123732 ಮತ್ತು ಎಂ.ಎಸ್. ಪ್ರದೀಪ್ ಕುಮಾರ್ ರವರು ಆರೋಪಿಯ ವಿರುದ್ದ ದಾಖಲು ಮಾಡಿರುವ ಪ್ರಕರಣ ಸಂಖ್ಯೆ ಸಿ.ಸಿ.364/2021 ಒಂದೇ ಸೀರಿಸ್ ನ ಚೆಕ್ಕು ಆಗಿರುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.1 ಚೆಕ್ಕು ಮತ್ತು ಪ್ರದೀಪ್ ಕುಮಾರ್ ರವರು ದಾಖಲು

ಮಾಡಿರುವ ಪ್ರಕರಣದಲ್ಲಿ ಇರುವ ಚೆಕ್ಕು ಒಂದೇ ಸೀರಿಸ್ ನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ 06.03.2015 ರ ಚೆಕ್ಕು ಮತ್ತು ನಿ.ಪಿ.1 ಚೆಕ್ಕಿನ ದಿನಾಂಕವು ಮತ್ತು ಎಂ.ಎಸ್. ಪ್ರದೀಪ್ ಕುಮಾರ್ ರವರು ಆರೋಪಿಯ ವಿರುದ್ದ ದಾಖಲು ಮಾಡಿರುವ ಚೆಕ್ಕಿನ ದಿನಾಂಕವು ಒಂದೇ ದಿನಾಂಕ ಆಗಿರುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.1 ರಲ್ಲಿ ಇರುವ ಬರವಣಿಗೆ ಮತ್ತು ಎಂ.ಎಸ್. ಪ್ರದೀಪ್ ಕುಮಾರ್ ರವರು ಆರೋಪಿಯ ವಿರುದ್ದ ದಾಖಲು ಮಾಡಿರುವ ಪ್ರಕರಣದಲ್ಲಿ ಚೆಕ್ಕಿನ ಬರವಣಿಗೆಯು ಒಂದೇ ತರಹ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ರಲ್ಲಿ ಇರುವ ಸಹಿಗೂ ಬರವಣಿಗೆಗೆ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. 2015 ರಲ್ಲಿ ಮುಕ್ತಾಯವಾಗಿರುವ ವ್ಯವಹಾರಕ್ಕೆ ನಾನು 2019 ರಲ್ಲಿ 4 ವರ್ಷಗಳು ಕಳೆದ ನಂತರ ಆರೋಪಿಗೆ ಕಿರುಕುಳ ನೀಡುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಯಾವುದೇ ಹಣವನ್ನು ನೀಡಲು ಬಾಧ್ಯಸ್ಥನಲ್ಲದಿದ್ದರು ಸಹ ನನ್ನ ಸ್ನೇಹಿತನ ಜೊತೆ ಸೇರಿಕೊಂಡು ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ದ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ